(ಇ) ಹಾಪ್‌ಕಾಮ್ಸ್ ಸಂಸ್ಥೆಯು ಮೂಲತಃ ರೈತರ ಸಂಸ್ಥೆಯಾಗಿದ್ದು, ಇದರ ಮೂಲಕ ತೋಟಗಾರಿಕೆ ಉತ್ಪನ್ನಗಳನ್ನು ಮಾರಾಟ ಮಾಡಲಾಗುತ್ತಿದೆ ತೋಟಗಾರಿಕೆ ವಹಿವಾಟು ಅತ್ಯಂತ ಸೂಕ್ಷ್ಮವಾದ ತಾಂತ್ರಿಕ ವಿಷಯವಾಗಿದ್ದು, ರೈತರ ಹಿತದೃಷ್ಟಯಿಂದ ಪರಿಣಿತ ತಂತ್ರಜ್ಞಾನವನ್ನು ಅಳವಡಿಸುವ ಅವಶ್ಯಕತೆ ಇರುತ್ತದೆ ಈ ಸಂಸ್ಥೆಯನ್ನು ತೋಟಗಾರಿಕೆ ಇಲಾಖೆಯೇ ಹುಟ್ಟುಹಾಕಿರುತ್ತದೆ ಹಾಪ್‌ಕಾಮ್ಸ್‌ನ ಆಡಳಿತವನ್ನು ರೈತರ ಹಿತದೃಷ್ಟಯಿಂದ ಉತ್ತಮಗೊಳಿಸಬೇಕಾಗಿರುವುದರಿಂದ ತೋಟಗಾರಿಕೆ ಇಲಾಖೆಯ ವ್ಯಾಪ್ತಿಗೆ ಮರಳಿ ಹಿಂಪಡೆಯಲಾಗಿದೆ

(ಈ) ಮೇಲಿನ (ಇ) ನಲ್ಲಿ ಉತ್ತರಿಸಿರುವಂತೆ

746 (290) ಶ್ರೀ ರಾಮಲಿಂಗಾರೆಡ್ಡಿ (ಜಯನಗರ) –ಕೃಷಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(ಅ) ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಉತ್ಪಾದನೆಯಾಗುವ ಅಪಾರ ಪ್ರಮಾಣದ ತ್ಯಾಜ್ಯವನ್ನು ವಿಲೇವಾರಿ ಮಾಡಲು ಕರ್ನಾಟಕ ಸಾವಯವ ಗೊಬ್ಬರ ನಿಗಮಕ್ಕೆ ಹೆಚ್ಚಿನ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ಸೂಕ್ತವಲ್ಲವೇ ,

(ಆ) ಹಾಗಿದ್ದಲ್ಲಿ, ಬೆಂಗಳೂರು ಮಹಾನಗರ ಪಾಲಿಕೆಯಿಂದ ಬೇಕಾಗುವ ಸೌಲಭ್ಯಗಳೇನು ,

(ಇ) ಕೆ ಸಿ ಡಿ ಸಿ ಮತ್ತೊಂದು ಘಟಕ ಪ್ರಾರಂಭಿಸಲು ಉದ್ದೇಶಿಸಿದೆಯೇ ,

(ಈ) ಹಾಗಿದ್ದಲ್ಲಿ, ಇದಕ್ಕಾಗಿ ಬೆಂಗಳೂರು ಮಹಾನಗರ ಪಾಲಿಕೆ ಜಾಗ ನೀಡಿದೆಯೇ ,

(ಉ) ತ್ಯಾಜ್ಯ ವಿಲೇವಾರಿಗೆ ಬೆಂಗಳೂರು ಮಹಾನಗರ ಪಾಲಿಕೆ ಕೆ ಸಿ ಡಿ ಸಿ ಗೆ ನೀಡುವ ಹಣವೆಷ್ಟು (ಒಂದು ವರ್ಷದ ವಿವರ ನೀಡುವುದು) ?

ಶ್ರೀ ಬಂಡೆಪ್ಪ ಕಾಶಂಪೂರ (ಕೃಷಿ ಸಚಿವರು) –

(ಅ) ಹೌದು

(ಆ) ಮೂಲಭೂತ ಸೌಕರ್ಯ ಕಲ್ಪಿಸುವ ಸಲುವಾಗಿ ಆರ್ಥಿಕ ನೆರವಿನ ಅವಶ್ಯಕತೆ ಇದೆ

(ಇ) ಇಲ್ಲಾ ಆದರೆ ಹಾಲಿ ಇರುವ ಘಟಕದ ಸಾಮರ್ಥ್ಯವನ್ನು ಹೆಚ್ಚಿಸುವ ಉದ್ದೇಶವಿದೆ

(ಈ) ಹೌದು

(ಉ) ಮಹಾನಗರ ಪಾಲಿಕೆಯು ನೀಡಿರುವ ಹಣದ ವಿವರಗಳನ್ನು ಕೆಳಗೆ ನೀಡಲಾಗಿದೆ –

ವರ್ಷ	ಹಣ ಬಿಡುಗಡೆ ಮಾಡಿರುವುದು (ಲಕ್ಷ ರೂ ಗಳಲ್ಲಿ)	ಉದ್ದೇಶ
2001-01	20 00	Bridge Loan
2002-03	6 00	Shifting of rejects
2003-04	4 81	Purchase of Plastic Sheet
2004-05	10 46	Cost of high roof shed
2005-06	5 00	Repair and fabrication of plant

747 (821) ಶ್ರೀ ರಮೇಶ್ ಕುಮಾರ್ ಕೆ ಆರ್ (ಶ್ರೀನಿವಾಸಪುರ) –ಪಶು ಸಂಗೋಪನಾ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(ಅ) ರಾಜ್ಯದಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘಗಳ ಅಸ್ತಿತ್ವಕ್ಕೆ ತೀವ್ರ ಅಪಾಯಕಾರಿ ರೀತಿಯಲ್ಲಿ ಮತ್ತು ಈ ಸಂಘಗಳಿಗೆ ಪರ್ಯಾಯವಾಗಿ ಖಾಸಗಿ ಡೈರಿಗಳನ್ನು ಪ್ರೋತ್ಸಾಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

(ಆ) ಹಾಗಿದ್ದಲ್ಲಿ, ಈ ಚಟುವಟಿಕೆಗಳನ್ನು ತಡೆಗಟ್ಟಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ರೇವೂನಾಯಕ್ ಬೆಳಮಗಿ (ಪಶುಸಂಗೋಪನಾ ಸಚಿವರು) –

(ಅ) ಕೇಂದ್ರ ಸರ್ಕಾರದ ಹಾಲು ಮತ್ತು ಹಾಲು ಉತ್ಪನ್ನಗಳ ಆದೇಶ 1992 ರ ಪ್ರಕಾರ ಪ್ರತಿ ದಿನ 10000 ಲೀಟರ್‌ಗಳಿಗಿಂತಲೂ ಹೆಚ್ಚು ಹಾಲನ್ನು ಸಂಗ್ರಹಿಸುವ ಪರಿಷ್ಕರಿಸುವ ಡೈರಿ ಘಟಕಗಳಿಗೆ ಪರವಾನಗಿಯನ್ನು ನಿಯಮದಡಿ ನೀಡಲಾಗುತ್ತಿದೆ ಆದರೆ ಈ ಖಾಸಗಿ ಡೈರಿ ಘಟಕಗಳನ್ನು ಸ್ಥಾಪಿಸಲು ಅವುಗಳಿಗೆ ಸರ್ಕಾರ/ಕೆ ಎಂ ಎಫ್ ಯಾವುದೇ ರೀತಿಯ ಪ್ರೋತ್ಸಾಹ ಧನ ಸೌಲಭ್ಯಗಳನ್ನು ಒದಗಿಸುತ್ತಿಲ್ಲ

(ಆ) ಯಾವುದೇ ಪ್ರೋತ್ಸಾಹ ಧನ ಸೌಲಭ್ಯಗಳನ್ನು ನೀಡುತ್ತಿಲ್ಲವಾದ್ದರಿಂದ ಪ್ರಶ್ನೆ ಉದ್ಭವಿಸುವುದಿಲ್ಲ ಆದರೆ ಹಾಲು ಮತ್ತು ಹಾಲು ಉತ್ಪನ್ನಗಳ ಆದೇಶ 1992ರ ಪ್ರಕಾರ ನಿಯಮದಡಿ ಪರವಾನಗಿ ಪಡೆದ ಡೈರಿ ಘಟಕಗಳು ಗುಣಮಟ್ಟದ ಹಾಲನ್ನು ಸಂಗ್ರಹಿಸಿ ಸಂಸ್ಕರಿಸಿ ಮಾರಾಟ ಮಾಡಲು ಅವಕಾಶವಿದ್ದು ಕಳಪೆ ಗುಣಮಟ್ಟದ ಅಥವಾ ಕಲಬೆರಕೆ ಹಾಲನ್ನು ಸರಬರಾಜು/ ಮಾರಾಟ ಮಾಡಿದ್ದಲ್ಲಿ ಆಹಾರ ಕಲಬೆರಕೆ ನಿಯಂತ್ರಣ ಕಾಯ್ದೆ 1954ರಡಿ ಮೊಕದ್ದಮೆ ಹೂಡಿ ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿ ಮಾಡಲು ಅವಕಾಶವಿರುತ್ತದೆ

748 (822) ಶ್ರೀ ರಮೇಶ್ ಕುಮಾರ್ ಕೆ ಆರ್ (ಶ್ರೀನಿವಾಸಪುರ) –